MYSORE LEGISLATIVE ASSEMBLY

THIRTIETH DAY.

Tuesday, 14th July 1953.

The House met in the Assembly Hall, Old Public Offices, Bangalore, at Twelve of the Clock on Tuesday, the 14th July 1953.

MR. SPEAKER (Sri H. Siddaiya, B.A., LL.B.) in the Chair.

QUESTIONS AND ANSWERS

Filling up the post of Inspector of Motor Vehicles, Chitaldrug District.

Q.—29. Sri S. GOPALA GOWDA (Sagar-Hosanagar).—

Will the Government be pleased to state:—

(*a*) whether the Public Service Commission called for applications for the post of an Inspector of Motor Vehicles, Chitaldrug District;

(*b*) if so, how many applications were received;

(*c*) how many applicants possessed the required qualifications for the abovesaid post;

(*d*) whether all the applicants were called for an interview;

(*e*) whether a selection has been made; if so, the name of the candidate along with his qualifications;

(*f*) if no selection has been made, why it has not been made;

(*g*) what arrangements have been made for filling up the post?

A.—Sri H. SIDDAVEERAPPA (Minister for Home and Industries).—

(*a*) Yes.
(*b*) 22.
(*c*) 5.
(*d*) No.
(*e*) No. Does not arise in view of answer to the first part of this question.

(*f*) The question of reverting an Inspector of Motor Vehicles who was O.O.D. in another Department was under consideration and if orders are passed reverting him as Inspector of Motor Vehicles there would be no vacancy to be filled up.

(*g*) A candidate has already been posted temporarily to the post.

ಶ್ರೀ ಎಸ್. ಗೋಪಾಲಗೌಡ.—ಈ ಅಪ್ಲಿಕೇಷನ್‌ಗಳನ್ನು ತಾವು Inspector of Motor Vehicles ಹುದ್ದೆಗೆ ಕರೆದಮೇಲೆ ಒಬ್ಬ Inspector of Motor Vehicles ರವರ ರಿವರ್ಷನ್ ಪ್ರಶ್ನೆ ಉದ್ಭವಿಸಿತೇ?

*ಶ್ರೀ ಎಚ್. ಸಿದ್ದವೀರಪ್ಪ.—ಹೌದು.

ಶ್ರೀ ಎಸ್. ಗೋಪಾಲಗೌಡ.—ಈಗ ಅವರನ್ನು ಹಾಗೆ ರಿವರ್ಟ್ ಮಾಡಲಾಯಿತೇ?

ಶ್ರೀ ಎಚ್. ಸಿದ್ದವೀರಪ್ಪ.—ಇಲ್ಲ.

ಶ್ರೀ ಎಸ್. ಗೋಪಾಲಗೌಡ.—ಈಗ ಹೊಸದಾಗಿ ನೇಮಕವಾಗಿರುವ ಕ್ಯಾಂಡಿಡೇಟಿನ ಹೆಸರನ್ನು ತಿಳಿಸುವುದಕ್ಕಾಗುತ್ತದೆಯೇ?

ಶ್ರೀ ಎಚ್. ಸಿದ್ದವೀರಪ್ಪ.—ಆಗುತ್ತದೆ. ಅವರ ಹೆಸರು ಶ್ರೀ ನಾಗೇಶರಾವ್ ಎಂದು. ಇವರನ್ನು ಈಗ ಸದ್ಯಕ್ಕೆ ಹಂಗಾಮಿಯಾಗಿ ಅಪಾಯಿಂಟ್ ಮಾಡಲಾಗಿದೆ.

ಶ್ರೀ ಎಸ್. ಗೋಪಾಲಗೌಡ.—ಇವರನ್ನು ತಾವು ನಿಬಂಧನೆಗಳಿಗನುಗುಣವಾಗಿ ಅಪಾಯಿಂಟ್ ಮಾಡಿಲ್ಲವೇ?

Sri H. SIDDAVEERAPPA.—His appointment is like this. He has been appointed temporarily until this post is permanently filled up by the Public Service Commission.

ಶ್ರೀ ಎಸ್. ಗೋಪಾಲಗೌಡ.—ಹಾಗೊಂದುವೇಳೆ ಅವರು ರಿವರ್ಟ್ ಆಗದೆಹೋದ ಭಾಗದಲ್ಲಿ ಈಗ ತಾವು ಇಂಟರ್‌ವ್ಯೂಗೆ ಕರೆದಿದ್ದ ಅರ್ಜಿದಾರರಲ್ಲೇ ಯಾರನ್ನಾದರೂ ಒಬ್ಬರನ್ನು ಈ ಹುದ್ದೆಗೆ ನೇಮಿಸಿಕೊಳ್ಳಲಾಗುತ್ತದೆಯೇ?

ಶ್ರೀ ಎಚ್. ಸಿದ್ದವೀರಪ್ಪ.—ಅದನ್ನು ಆಲೋಚನೆ ಮಾಡುತ್ತಿದ್ದೇವೆ. In the meanwhile the General Manager has also written that ಇನ್ನೊಬ್ಬರನ್ನು ಅಲ್ಲಿಗೆ ಪರ್ಮನೆಂಟ್‌ಆಗಿ ಕಳುಹಿಸಿಕೊಡ

*Asterisk indicates that the remarks or speeches have not been revised by the Member concerned.

(ಶ್ರೀ ಎಚ್. ಸಿದ್ಧವೀರಪ್ಪ)

ಬೇಕೆಂದು, ಇವರಾಗಲೇ ಅಲ್ಲಿ ಕೆಲಸಮಾಡಲು ಪ್ರಾರಂಭಿಸಿ ಮೂರು ವರ್ಷಗಳಾಗಿರುತ್ತವೆಂದೂ ಮತ್ತು ಅವರನ್ನು ಬೇರೆ ಕಡೆಗೇನಾದರೂ ವರ್ಗ ಮಾಡುತ್ತೀರಾ, ಹೇಗೆ ಎಂತಲೂ ಕೇಳಿದ್ದಾರೆ. ಆದರೆ ಆ ಪ್ಯೆಲನ್ನೂ ಹೆಂಡಿಂಗ್‌ನಲ್ಲಿದೆ. ಅದು ತೀರ್ಮಾನ ವಾದಮೇಲೆ, ಅವರನ್ನು ರಿಪರ್ಟ್ ಮಾಡದೆ ಹಾಗೆಯೇ O.O.D. ಆಗಿ ರೋಡ್ ಟ್ರಾನ್ಸ್‌ಪೋರ್ಟ್ ಇರಾಖೆಯಲ್ಲಿ ಇಡುವಂತೆ ಆದರೆ ಆಗ ಈ ವೇಕೆನ್ಸಿಯನ್ನು ಭರ್ತಿ ಮಾಡುತ್ತೇವೆ.

ಶ್ರೀ ಎಸ್. ಗೋಪಾಲಗೌಡ.—ಪಬ್ಲಿಕ್ ಸರ್ವಿಸ್ ಕಮಿಷನ್ನಿನವರ ಮುಂದೆ ಅಪ್ಲಿಕೆಂಟ್ಸ್‌ಗಳ ಇಂಟರ್ ವ್ಯೂ ಪ್ರಶ್ನೆ ಬಂದಾಗ, ಆ ಸಂದರ್ಭದಲ್ಲಿ ಬೇರೆ ಕಡೆಯಿಂದ ಒತ್ತಾಯ ಬಂದುದರಿಂದ ಆ ಅರ್ಜಿದಾರರಿಗೆ ಆ ಕೆಲಸ ಕೊಡುವುದನ್ನೇನಾದರೂ ನಿಲ್ಲಿಸಲಾಯಿತೇ?

ಶ್ರೀ ಎಚ್. ಸಿದ್ಧವೀರಪ್ಪ.—ಇಲ್ಲ. ಅದು ಸರಿಯಲ್ಲ. ಆ ರೀತಿ ಮಾಡಲಲ್ಲ.

ಶ್ರೀ ಕೆ. ಪುಟ್ಟಸ್ವಾಮಿ.—ಆ ಅರ್ಜಿಗಳನ್ನು ಕರೆದದ್ದು ಯಾವಾಗ?

Sri H. SIDDAVEERAPPA.—They were advertised by the Public Service Commission in the *Mysore Gazette* in the month of December 1952.

ಡಿಸೆಂಬರ್ 1952ರಲ್ಲಿ ಅಡ್ವರ್‌ಟೈಜ್ ಆಗಿದೆ. ಅದು ಆದಮೇಲೆ 1952ನೆಯ ಏಪ್ರಿಲ್ 7ನೆಯ ತಾರೀಖು ಅವರುಗಳ ಇಂಟರ್‌ವ್ಯೂ ಆಗಬೇಕಾಗಿತ್ತು.

ಶ್ರೀ ಕೆ. ಪುಟ್ಟಸ್ವಾಮಿ.—ಈಗ ಆ ಟ್ರಾನ್ಸ್‌ಪೋರ್ಟ್ ಇಲಾಖೆಯಲ್ಲಿ O.O.D ಯಾಗಿ ಕೆಲಸಮಾಡುತ್ತಿರುವ ಇಕ್ಸೆಕ್ಯೂರ್ ಆಫ್ ಮೋಟಾರ್ ವೆಹಿಕಲ್ಸ್ ಅವರ ಹೆಸರನ್ನು ಹೇಳುವುದಕ್ಕೆ ಸಾಧ್ಯವಿದೆಯೇ?

ಶ್ರೀ ಎಚ್. ಸಿದ್ಧವೀರಪ್ಪ.—ಅವರ ಹೆಸರು ಶ್ರೀ ರಾಮಚಂದ್ರಪ್ಪ ಎಂದು.

ಶ್ರೀ ಕೆ. ಪುಟ್ಟಸ್ವಾಮಿ.—ಈಗ ತಾವು ತಿಳಿಸಿದವರು ಆ ಟ್ರಾನ್ಸ್‌ಪೋರ್ಟ್ ಇಲಾಖೆಯಲ್ಲಿ O.O.D.ಯಾಗಿ ಕೆಲಸ ಮಾಡುತ್ತಿಲ್ಲ. ಆ ರೋಡ್ ಟ್ರಾನ್ಸ್‌ಪೋರ್ಟ್ ಇಲಾಖೆ ತೆರೆದಾಗಿನಿಂದಲೂ ಅವರನ್ನು ಖಾಯಂ ಆಗಿ ಅಲ್ಲೇ ನೇಮಿಸಲಾಗಿರುತ್ತದೆಂಬುದು ನಿಜವೇ?

ಶ್ರೀ ಎಚ್. ಸಿದ್ಧವೀರಪ್ಪ.—ಇಲ್ಲ. ಆ ಇಲಾಖೆಯಲ್ಲಿ ಖಾಯಂ Inspector of Motor Vehicles ಇಲ್ಲದೆ ಇರುವುದರಿಂದ ಇವರನ್ನು ಅಲ್ಲಿಗೆ ಹಂಗಾಮಿ ಯಾಗಿ ವರ್ಗಮಾಡಲಾಗಿದೆ. ಅಲ್ಲಿ ಅವರಿಗೆ ಆ ಪೋಸ್ಟ್ ಇನ್ನೂ ಪರ್ಮನೆಂಟ್ ಆಗಿಲ್ಲ. ಅದು ಖಚಿತವಾಗಿ ತೀರ್ಮಾನವಾಗುವುದಕ್ಕೆ ಮುಂಚೆ ಹೀಗೆ ಅರ್ಜಿಗಳನ್ನು ಕರೆಯಲಾಗಿದೆ. 1952ನೆಯ ಜೂನ್ 9ರಲ್ಲಿ ಚಿತ್ರದುರ್ಗ ಜಿಲ್ಲೆಗೆ ಈ ಹುದ್ದೆ ಹೊಸದಾಗಿ ಏರ್ಪಾಡಾಯಿತು. ಆ ಜಾಗವನ್ನು ಭರ್ತಿಮಾಡುವುದಕ್ಕಾಗಿ ಈ ಅರ್ಜಿಗಳನ್ನು ಕರೆಯಲಾಯಿತು. ಈಗ ಅವರು ಕೆಲಸಮಾಡುತ್ತಿರುವ ರೋಡ್ ಟ್ರಾನ್ಸ್‌ಪೋರ್ಟ್ ಇಲಾಖೆಯಲ್ಲಿ ಅವರ ಸ್ಥಾನ ಖಾಯಂ ಆಗದೆ ಇದ್ದರೆ, ಈ ಹೊಸ ಹುದ್ದೆಯನ್ನು ನಿರ್ಮಾಣ ಮಾಡಿದ್ದರಿಂದ ಒಂದು ಸ್ಥಾನ ಸೂಪರ್‌ಫ್ಲುಯಸ್ ಆಗುತ್ತದೆ. ಆ ಹುದ್ದೆಯ ಬಗ್ಗೆ ಇನ್ನೂ ಸರ್ಕಾರಿ ಹುಕುಂ ಆಗಿಲ್ಲ.

ಶ್ರೀ ಕೆ. ಪುಟ್ಟಸ್ವಾಮಿ.—ಅವರನ್ನು ಆ ಇಲಾಖೆಗೆ ಅಲ್ಲಿ O. O. D.ಯಾಗಿ ಕೆಲಸಮಾಡಲು ಎಷ್ಟು ದಿವಸಗಳ ಹಿಂದೆ ನೇಮಿಸಲಾಯಿತು?

ಶ್ರೀ ಎಚ್. ಸಿದ್ಧವೀರಪ್ಪ.—ನೋಟೀಸ್.

ಶ್ರೀ ಕೆ. ಪುಟ್ಟಸ್ವಾಮಿ.—ಅವರು ಆ ಡಿಪಾರ್ಟ್‌ಮೆಂಟ್ ಹುಟ್ಟಿದಾಗಿನಿಂದಲೂ ಅಲ್ಲೇ ಕೆಲಸಮಾಡುತ್ತಿದ್ದಾರೆಂಬುದು ತಮಗೆ ಗೊತ್ತೇ?

ಶ್ರೀ ಎಚ್. ಸಿದ್ಧವೀರಪ್ಪ.—As I have already stated ಅವರು ಅಲ್ಲಿ ಎಷ್ಟು ದಿವಸಗಳಿಂದ ಕೆಲಸ ಮಾಡುತ್ತಿದ್ದಾರೆಂಬ ಬಗ್ಗೆ ಖಚಿತವಾದ ತಾರೀಖು ಗೊತ್ತಿಲ್ಲ.

ಶ್ರೀ ಕೆ. ಪುಟ್ಟಸ್ವಾಮಿ.—1952ನೆಯ ಇಸವಿಯಲ್ಲಿ ತಾವು ಚಿತ್ರದುರ್ಗಕ್ಕೆ ಒಂದು ಹೊಸದಾಗಿ ಈ ಹುದ್ದೆಯನ್ನು ಆರ್ಡರ್ ಮಾಡದೆ ಇದ್ದು, ಈಗ ಆ ಇಲಾಖೆಯಲ್ಲಿ ಕೆಲಸಮಾಡುತ್ತಿರುವವರೂ ಸಹ ಈ ಇಕ್ಸೆಕ್ಯೂರ ಹುದ್ದೆಗೆ ರಿಪರ್ಟ್ ಆಗಿದ್ದಲ್ಲಿ ಆಗ ಒಂದು ವೇಕೆನ್ಸಿ ರಿಟ್ರೆಂಚ್ ಆಗಬೇಕಾಗಿತ್ತಲ್ಲವೇ?

ಶ್ರೀ ಎಚ್. ಸಿದ್ಧವೀರಪ್ಪ.—ಏನಾಗಬಹುದಿತ್ತೋ I cannot say.

ಶ್ರೀ ಬಿ. ರಾಚಯ್ಯ.—ಯಾರನ್ನಾದರೂ ತಾವು ದೃಷ್ಟಿಯಲ್ಲಿ ಇಟ್ಟುಕೊಂಡು ಈ ಹುದ್ದೆಯನ್ನು ನಿರ್ಮಿಸಲಾಯಿತೇ?

ಶ್ರೀ ಎಚ್. ಸಿದ್ಧವೀರಪ್ಪ.—ಹಾಗೆ ಯಾರೂ ಸರ್ಕಾರದವರ ದೃಷ್ಟಿಯಲ್ಲಿ ಇರಲಿಲ್ಲ.

ಶ್ರೀ ಬಿ. ರಾಚಯ್ಯ.—ಅವರ ಹುದ್ದೆ ಬೇರೆ ಕಡೆ ಖಾಯಂ ಆಗದೆ ಇರುವಾಗ, ಮುಂಚಿತವಾಗಿಯೇ ಆ ಹುದ್ದೆಗೆ ಅಡ್ವರ್‌ಟೈಜ್‌ಮಾಡಲು ಕಾರಣವೇನು?

ಶ್ರೀ ಎಚ್. ಸಿದ್ಧವೀರಪ್ಪ.—ಆ ಹುದ್ದೆಗೆ ಅವಶ್ಯಕತೆಯಿದೆ ಎಂದು ಸರ್ಕಾರದವರಿಗೆ ಕಂಡುಬಂದಮೇಲೆ ಸರ್ಕಾರದವರು 1952ನೆಯ ಜೂನ್ 9ನೆಯ ತಾರೀಖಿನಲ್ಲಿ ಪಬ್ಲಿಕ್ ಸರ್ವಿಸ್ ಕಮಿಷನ್ನಿನ ಮೂಲಕ ಅಡ್ವರ್‌ಟೈಜ್ ಮಾಡಿಸಲಾಯಿತು. ಈಗ ಶ್ರೀ ರಾಮಚಂದ್ರಪ್ಪ ಅವರು ಕೆಲಸ ಮಾಡುತ್ತಿರುವ ಹುದ್ದೆಯಲ್ಲಿ ಅವರಿಗೆ ಇನ್ನೂ ಖಾಯಂ ಆಗದೆ ಇರುವಾಗ ಅದನ್ನು ಹಾಗೆಯೇ ಬಿಟ್ಟುಕೊಂಡು ಆ ಒಂದು ಸ್ಥಾನದಲ್ಲಿ ಹೇಗೆ ಇಬ್ಬರನ್ನು ನೇಮಕಮಾಡಲು ಸಾಧ್ಯವಾಗುತ್ತದೆ?

Absorption of workers of Oorgaum Mines by starting new factories.

Q.—35. Sri P. M. SWAMIDURAI (Kolar Gold Fields—Scheduled Castes).—

Will the Government be pleased to state:—

(*a*) if any representations have been received from Kolar Gold Fields for starting a Textile Mill or Machine Tool Factory to meet the situation arising out of the proposed closure of